# ಹಿಂಗೈತೆ ವಾಸ

■ ಸೋಮಲಿಂಗ ಬೇಡರ

ಗುಬ್ಬಿಗೈತೆ ಗೂಡು
ಆನೆಗೈತೆ ಕಾಡು
ಗೆದ್ದಲುಗೈತೆ ಹುತ್ತ
ಕುದುರೆಗೈತೆ ಲಾಯ

ಹಸುಗೈತೆ ಕೊಟ್ಟಿಗೆ
ಗಿಳಿಗೈತೆ ಪೊಟರೆ
ಹುಲಿಗೈತೆ ಗುಹೆ
ಮನುಜಗೈತೆ ಮನೆ

ಇಲಿಗೈತೆ ಬಿಲ
ಮೀನಿಗೈತೆ ಜಲ
ಆಮೆಗೈತೆ ತಳ
ಹಂಸಕ್ಕೈತೆ ಕೊಳ

ಮಂಗಗೈತೆ ಮರ
ಯೇತಿಗೈತೆ ಹಿಮ
ಕುರಿಗೈತೆ ದೊಡ್ಡಿ
ಓತಿಗೈತೆ ಬೇಲಿ

ಜೇಡಕ್ಕೈತೆ ಬಲೆ
ಮಿಡತೆಗೈತೆ ಹುಲ್ಲು
ಹಿಂಗೈತೆ ವಾಸ
ಚಂದೈತೆ ಲೋಕ.



ವಿಜಯಕುಮಾರಿ

## ಕುಂಚ ಪ್ರಪಂಚ






**ಶಿಶಿರ್ ಮೋತ್ಕೂರ್**
4ನೇ ತರಗತಿ ನ್ಯಾಷನಲ್ ಪಬ್ಲಿಕ್ ಸ್ಕೂಲ್
ರಾಜಾಜಿನಗರ, ಬೆಂಗಳೂರು






**ಪ್ರಣವಕುಮಾರ ದಂಡಿನ**
1ನೇ ತರಗತಿ
ಸರಕಾರಿ ಕಿರಿಯ ಪ್ರಾಥಮಿಕ ಶಾಲೆ,
ಸೋಮನಕಟ್ಟೆ, ಹಾವೇರಿ ಜಿಲ್ಲೆ